1	2	3	4	5	6	7
2.	ತಿಕೋಟ-ಅಥಣಿ	ರೋಹನ್ ಬಿಲ್ಡರ್ಸ್ ಮತ್ತು ಜೆ.ಎಂ.ಎಂ. (ಜೆ.ವಿ) ಪುಣೆ	44	16	19-2-02	19-6-03
3.	ಅಥಣಿ-ಶೆಡವಾಳ	ಟಾರ್ ಮಾಟ್ ಇನ್ ಫ್ರಾಸ್ಟ್ರಕ್ಚರ್ ಅಂಡ್ ಇಂಜಿನಿಯರಿಂಗ್ (ಲಿ) ಮುಂಬೈ	49	14	19-2-02	19-4-03
4.	ಶೆಡಬಾಳ-ಸುಕೇಶ್ವರ	ಎಸ್.ಪಿ.ಲಕ್ಷ್ಮಣ್ ಚಿನ್ನೈ	56	22	19-2-02	19-12-03

ಕರ್ನಾಟಕದ ಅಭಿವೃದ್ಧಿ ಕಾರ್ಯಕ್ರಮಗಳ ಸಭೆ

913 (1052) - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತಾಲ್ಲೂಕಿನ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಸಭೆಯನ್ನು ಪ್ರತಿ 3 ತಿಂಗಳಿಗೊಮ್ಮೆ ಜರುಗಿಸಲು ಸರ್ಕಾರದ ಆದೇಶವೇನಾದರೂ ಇದೆಯೆ.

ಆ. ಸರ್ಕಾರದ ಆದೇಶದಂತೆ ಪ್ರತಿ 3 ತಿಂಗಳಿಗೊಮ್ಮೆ ತ್ರೈಮಾಸಿಕ ಕೆ.ಡಿ.ಪಿ. ಸಭೆಯನ್ನು ಜರುಗಿಸದಿರಲು ಸರ್ಕಾರದಿಂದ ಆದೇಶವೇನಾದರೂ ಇದೆಯೆ.

ಇ. ಕಳೆದ 2 ವರ್ಷಗಳಲ್ಲಿ ಎಷ್ಟು ಸಭೆಗಳನ್ನು ಕರೆಯಬಹುದಾಗಿತ್ತು, ಮತ್ತು ಸಭೆಗಳನ್ನು ಜರುಗಿಸದಿರಲು ಕಾರಣವೇನು.

ಈ. ಸಭೆ ಕರೆಯದಿರಲು ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆಯೆ.

ಉ. ಹಾಗಿದ್ದಲ್ಲಿ ಜರುಗಿಸಿದ ಕ್ರಮವೇನು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ. ಹೌದು.

ಆ. ಇಲ್ಲ.

ಇ. ತಿಕೋಟ ಮತಕ್ಷೇತ್ರವನ್ನೊಳಗೊಂಡ ಬಿಜಾಪುರ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳು ಅಂದರೆ 2000 ಮತ್ತು 2001 ವರ್ಷಗಳಲ್ಲಿ 8 ತ್ರೈಮಾಸಿಕ ಕೆ.ಡಿ.ಪಿ. ಸಭೆಗಳನ್ನು ನಡೆಸಬೇಕಾಗಿದ್ದು, ಒಂದು ತ್ರೈಮಾಸಿಕ ಕೆ.ಡಿ.ಪಿ. ಸಭೆಯನ್ನು ನಡೆಸಲಾಗಿದೆ. ಬಿಜಾಪುರ ತಾಲ್ಲೂಕು ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಬಿಜಾಪುರ, ತಿಕೋಟ ಮತ್ತು ಬಸವನ ಬಾಗೇವಾಡಿ ಹೀಗೆ ಮೂರು ಮತಕ್ಷೇತ್ರಗಳಿದ್ದು ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆಯನ್ನು ಯಾವ ಮತಕ್ಷೇತ್ರದ ಶಾಸಕರು ವಹಿಸಬೇಕೆಂಬ ಬಗ್ಗೆ ವಿವಾದ ಉಂಟಾಗಿ ಮೊದಲಿನ 4 ಸಭೆಗಳನ್ನು ಕರೆಯಲಾಗಿರಲಿಲ್ಲ. ನಂತರ ತಾಲ್ಲೂಕಿನ ಅತೀ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರೇ ತ್ರೈಮಾಸಿಕ

ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ದಿನಾಂಕ 19-2-2001ರಂದು ಸರ್ಕಾರವು ಸ್ಪಷ್ಟೀಕರಣ ನೀಡಿತು. ಈ ಸ್ಪಷ್ಟೀಕರಣದನ್ವಯ ಅತೀ ಹೆಚ್ಚು ಮತ ಕ್ಷೇತ್ರವನ್ನು ಹೊಂದಿರತಕ್ಕ ತಿಕೋಟ ಮತಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರೆ ಅಧ್ಯಕ್ಷತೆ ವಹಿಸಬೇಕೆಂಬ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರ ನಿರ್ದೇಶನದನ್ವಯ 19-3-2001 ರಂದು ಸಭೆ ಕರೆಯಲಾಗಿತ್ತು. ಆ ನಂತರ ಉಳಿದ ಸಭೆಗಳನ್ನು ಕರೆಯಲು ಸದರಿ ಶಾಸಕರಿಗೆ ಮೌಖಿಕವಾಗಿ ಕೋರಲಾಯಿತು. ಆದರೆ ದಿನಾಂಕ ಹೊಂದಾಣಿಕೆಯಾಗದ್ದರಿಂದ ಸಭೆ ಕರೆಯಲಾಗಲಿಲ್ಲವೆಂದು ಸದರಿ ತ್ರೈಮಾಸಿಕ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಿಜಾಪುರ ತಾಲ್ಲೂಕು ಇವರು ತಿಳಿಸಿದ್ದಾರೆ.

ಈ. ಹೌದು.

ಉ. ಯಾರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ. ಸಭೆಯನ್ನು ಜರುಗಿಸಬೇಕು ಎಂಬುದರ ಬಗ್ಗೆ ವಿವರಣೆ ನೀಡಿದ್ದಾಗ್ಯೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಿಜಾಪುರ ತಾಲ್ಲೂಕು ಇವರು ಸಭೆ ಕರೆದಿರುವುದಕ್ಕೆ ಸೂಕ್ತ ವಿವರಣೆ ನೀಡಲು ಅವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಮಾಡಲಾಗಿದೆ ಮತ್ತು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ನಬಾರ್ಡ್ ಯೋಜನೆಯಡಿ ಇಟ್ಟಂಗಿಹಾಳ- ಲೋಹಗಾಂವ- ಸಿದ್ಧಾಪೂರ (ಕೆ), ತಿಕೋಟಾ ರಸ್ತೆ ಬಗ್ಗೆ

914 (1172) - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಬಾರ್ಡ್ ಯೋಜನೆಯಡಿ ಇಟ್ಟಂಗಿಹಾಳ- ಲೋಹಗಾಂವ-ದಾಧರಗಿ-ಸಿದ್ಧಾಪುರ(ಕೆ)-ತಿಕೋಟಾ ರಸ್ತೆ ನಿರ್ಮಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ, ಈ ರಸ್ತೆಯನ್ನು ಯಾವಾಗ ನಿರ್ಮಿಸಲಾಯಿತು?

ಆ. ಇದಕ್ಕಾಗಿ ಮಂಜೂರಾದ ಹಣ ಎಷ್ಟು? ಖರ್ಚು ಮಾಡಲಾದ ಹಣ ಎಷ್ಟು?

ಇ. ಈ ರಸ್ತೆಯ ಮೇಲೆ ತಗ್ಗುಗಳು ಬಿದ್ದಿದ್ದು ರಸ್ತೆ ಕೆಲ ಭಾಗ ಕೊಚ್ಚಿ ಹೋಗಿದ್ದು ಸರ್ಕಾರಕ್ಕೆ ತಿಳಿದುಬಂದಿದೆಯೇ.

ಈ. ಈ ರಸ್ತೆಯು ಯಾವ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದೆ.

ಉ. ಹಾಗಿದ್ದರೆ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು, ಕೈಕೊಳ್ಳದಿದ್ದಲ್ಲಿ, ಕಾರಣಗಳೇನು, ಯಾವಾಗ ದುರಸ್ತಿಗೊಳಿಸಲಾಗುವುದು, ನಿರ್ದಿಷ್ಟ ಕಾಲ ಮಿತಿ ತಿಳಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಇಟ್ಟಂಗಿಹಾಳ ಲೋಹಗಾಂವ ಧನ್ನರಗಿ ರತ್ನಾಪುರ ತಾಜಾಪುರ ಧನ್ಯಾಳ ನಿಡೋಣಿ ಹಳ್ಳಿ ರಸ್ತೆಯನ್ನು ನಬಾರ್ಡ್ ಆರ್‌ಐಡಿಎಫ್-3ರಡಿ ಕೈಗೊಂಡು ದಿನಾಂಕ 31-3-2001ರಲ್ಲಿ ಪೂರ್ಣಗೊಳಿಸಲಾಗಿದೆ.